# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

## ಎಸ್ ಸಿ ಕೇಸ್ ನಂ.33 /2023

ಚಾ.ಸಾ. 16

ಪ್ರಾ.ಸಾ. 7

## ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 05.08.2026

| | | |
|---|---|---|
| ಸಾಕ್ಷಿದಾರರ ಹೆಸರು | : | ಸತೀಶ |
| ತಂದೆಯ ಹೆಸರು | : | ಮಹಾದೇವನಾಯಕ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪಿ.ಐ. ಜಿಲ್ಲಾ ವಿಶೇಷ ಘಟಕ ಮೈಸೂರು ಜಿಲ್ಲೆ |
| ವಾಸ | : | ಮೈಸೂರು |

## ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ

1. ನಾನು 2021 ರಿಂದ 2023 ರವರೆಗೆ ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

2. ಈ ಪ್ರಕರಣದಲ್ಲಿ ಸಾಕ್ಷಿದಾರರಾದ ಚಾಸಾ.15 ಸಿದ್ದರಾಜುರವರು ತೀರಿಕೊಂಡಿರುತ್ತಾರೆ. ಅವರು ನನ್ನ ಸಹೋದ್ಯೋಗಿ ಮತ್ತು ನನ್ನ ಕೈಕೆಳಗಿನ ಅಧಿಕಾರಿಯಾಗಿದ್ದರಿಂದ ಅವರು ಮಾಡಿದ ತನಿಖೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಹೀಗಾಗಿ ಅವರು ಮಾಡಿದ ತನಿಖೆಯ ಬಗ್ಗೆ ನಾನು ಸಾಕ್ಷಿ ಕೊಡುತ್ತಿದ್ದೇನೆ.

3. ದಿನಾಂಕ 14.11.2020 ರಂದು ಬೆಳಗ್ಗೆ 7.30 ಗಂಟೆ ಸಮಯದಲ್ಲಿ ಎ.ಎಸ್.ಐ ಸಿದ್ದರಾಜುರವರು ಠಾಣಾ ಪ್ರಭಾರದಲ್ಲಿದ್ದಾಗ ಈ ಪ್ರಕರಣದ ಪಿರ್ಯಾದಿ

ಮಂಜುರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಅವರು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 219/2020 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ರವಾನಿಸಿರುತ್ತಾರೆ. ಈಗ ನಾನು ದೂರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ. ಚಾಸಾ.15 ರವರ ಸಹಿಯನ್ನು ಸಾಕ್ಷಿಯು ಗುರುತಿಸಿದ್ದರಿಂದ ನಿಪಿ.1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಈಗ ನಿಪಿ.11 ಎಂದು, ಚಾಸಾ.15 ರವರ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು.

4. ಅದೇ ದಿನ ಸದರಿಯವರು ಪಂಚರಾದ ಶಂಕರಪ್ಪ, ಕುಮಾರ ಮತ್ತು ಲೊಕೇಶ ರವರ ಸಮಕ್ಷಮದಲ್ಲಿ ಬೆಳಗ್ಗೆ 11.00 ಗಂಟೆಯಿಂದ ಮದ್ಯಾಹ್ನ 1.00 ಗಂಟೆಯವರೆಗೆ ಮೃತ ಕೆಂಪಮ್ಮರವರ ಶವ ಪಂಚನಾಮೆಯನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಜರುಗಿಸಿರುತ್ತಾರೆ. ಸದರಿ ದಾಖಲೆಯು ಜೆರಾಕ್ಸ್ ಪ್ರತಿ ಆಗಿದ್ದರಿಂದ ನಿಶಾನೆಯೆಂದು ಗುರುತಿಸಿರುವುದಿಲ್ಲ. ಶವ ಪಂಚನಾಮೆಯ ಕಾಲಕ್ಕೆ ಅವರ ರಕ್ತ ಸಂಬಂಧಿಯಾದ ಶ್ರೀಮತಿ ಜಯಲಕ್ಷ್ಮಿ ಕೋಂ ಪುಟ್ಟಸ್ವಾಮಿ, ಮಂಜುನಾಥ್ ಸಿ.ಜೆ ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 14.11.2020 ರಂದು ಸಿದ್ದರಾಜುರವರು ಶವದ ಬೆಂಗಾವಲಿಗೆ ಇದ್ದ ಚಾಸಾ.14 ನಟೇಶ್ ಬಾಬುರವರ ಹೇಳಿಕೆ ಪಡೆದುಕೊಂಡಿರುತ್ತಾರೆ.

5. ದಿನಾಂಕ 15.11.2020 ರಂದು ಸಿದ್ದರಾಜುರವರು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪಂಚರಾದ ಸಂದೇಶ್ ಕುಮಾರ್ ಮತ್ತು ನವೀನರವರ ಸಮಕ್ಷಮ ಪಿರ್ಯಾದಿ ತೋರಿಸಿದಂತೆ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಚಾಸಾ.15 ರವರ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ. ಸದರಿ ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ಅದನ್ನು ನಿಪಿ.12 ಎಂದು, ಚಾಸಾ.15 ರವರ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಿದ್ದರಾಜುರವರು ಚಾಸಾ.1 ರವರ ಮುಂದುವರೆದ ಹೇಳಿಕೆ, ಚಾಸಾ.2 ಮತ್ತು 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ಈ ಪೈಕಿ

ಚಾಸಾ.1 ರವರು ನಿಪಿ.7 ರಂತೆ, ಚಾಸಾ.2 ಮತ್ತು 3 ರವರು ಕ್ರಮವಾಗಿ ನಿಪಿ.8 ಮತ್ತು 9 ರಂತೆ ಮರು ಹೇಳಿಕೆ ಮತ್ತು ಹೇಳಿಕೆಗಳನ್ನು ನೀಡಿರುತ್ತಾರೆ.

6. ಅದೇ ದಿನ ಕೃತ್ಯಕ್ಕೆ ಸಂಬಂಧಿಸಿದ ಮಹೀಂದ್ರಾ ಕಂಪನಿಯ ಕೆಂಪು ಬಣ್ಣದ ಟ್ರ್ಯಾಕ್ಟರ್ ಇಂಜಿನ್ ನಂಬರ್ KA-35-T7554 ನೇದನ್ನು ವಶಪಡಿಸಿಕೊಂಡಿರುತ್ತಾರೆ. ಅದರ ಮಾಲುಪಟ್ಟಿ ಸಂಖ್ಯೆ 175/2020 ನೇದನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಟ್ರ್ಯಾಕ್ಟರ್ ನ ಛಾಯಾಚಿತ್ರಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.3 ರಿಂದ 6 ಎಂದು ಗುರುತಿಸಲಾಗಿದೆ.

7. ಅದೇ ದಿನ ಸಿದ್ದರಾಜುರವರು ಸಾಕ್ಷಿದಾರರಾದ ಮಹೇಶ ಮತ್ತು ತಮ್ಮಣ್ಣರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 04.12.2020 ರಂದು ಸಿದ್ದರಾಜುರವರು RTO ರವರಿಗೆ ವಾಹನವನ್ನು ತಪಾಸಣೆ ಮಾಡಿ ಮೋಟಾರು ವಾಹನ ನಿರೀಕ್ಷಕರ ವರದಿಯನ್ನು ನೀಡುವಂತೆ ಚಾಸಾ.14 ರವರು ಕೋರಿಕೊಂಡಿರುತ್ತಾರೆ. ಸದರಿ ಕೋರಿಕೆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ.13 ಎಂದು ಗುರುತಿಸಲಾಯಿತು. ಅದೇ ದಿನ RTO ರವರು ಸದರಿ ವಾಹನವನ್ನು ತಪಾಸಣೆ ಮಾಡಿ ತಮ್ಮ ವರದಿಯನ್ನು ನೀಡಿರುತ್ತಾರೆ. ಸದರಿ ಮೋಟಾರು ವಾಹನ ನಿರೀಕ್ಷಕರ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.14 ಎಂದು, ಚಾಸಾ.15 ರವರ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ಎ.ಎಸ್.ಐ ಸಿದ್ದರಾಜುರವರು ಸದರಿ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ.

8. ಅದೇ ದಿನ ಆರೋಪಿಯು ನ್ಯಾಯಾಲಯದಿಂದ ಒಂದು ಆದೇಶವನ್ನು ಪಡೆದುಕೊಂಡು ಬಂದು ಟ್ರ್ಯಾಕ್ಟರ್ ಬಿಡುಗಡೆ ಮಾಡಲು ಕೋರಿಕೊಂಡಿರುತ್ತಾನೆ. ಎ.ಎಸ್.ಐ ಸಿದ್ದರಾಜುರವರು ಆರೋಪಿಯಿಂದ ಸೂಕ್ತ ಬಾಂಡ್ ಪಡೆದುಕೊಂಡು ಸದರಿ ವಾಹನವನ್ನು ಬಿಡುಗಡೆ ಮಾಡಿರುತ್ತಾರೆ ಮತ್ತು ಟ್ರ್ಯಾಕ್ಟರ್ ನ ಫೋಟೋಗಳನ್ನು ತೆಗೆದುಕೊಂಡಿರುತ್ತಾರೆ. ನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಿಂದ ಮೃತ ಕೆಂಪಮ್ಮರವರ ಶವ ಪರೀಕ್ಷಾ ವರದಿ ಬಂದಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ. ಸದರಿ ಶವ ಪರೀಕ್ಷಾ ವರದಿಯನ್ನು ಈಗಾಗಲೇ ನಿಪಿ.10

ಎಂದು ಗುರುತಿಸಲಾಗಿದ್ದು, ಚಾಸಾ.15 ರವರ ಸಹಿಯನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು.

9. ಆನಂತರ ದಿನಾಂಕ 20.09.2021 ಈ ಪ್ರಕರಣದ ಮುಂದಿನ ತನಿಖೆಯನ್ನು ಎ.ಎಸ್.ಐ ಸಿದ್ದರಾಜುರವರಿಂದ ಪಡೆದುಕೊಂಡು ಕಡತವನ್ನು ಪರಿಶೀಲಿಸಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿ ವಿರುದ್ಧ ನಾನು ಕಲಂ 304(2) ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

10. ನಾವು ಸಾಮಾನ್ಯವಾಗಿ ತನಿಖೆ ಮುಂದುವರೆಸುವಾಗ ಈ ಹಿಂದಿನ ಅಧಿಕಾರಿಗಳು ಮಾಡಿದ ತನಿಖೆಯನ್ನು ಕೂಲಂಕುಷವಾಗಿ ಪರಿಶೀಲನೆ ಮಾಡುತ್ತೇವೆ ಎಂದರೆ ನಿಜ. ತಂದನಂತರ ತನಿಖೆಯನ್ನು ಮುಂದುವರೆಸುತ್ತೇವೆ ಎಂದರೆ ನಿಜ. ದೂರು ಕೊಡಲಿಕ್ಕೆ ಸುಮಾರು 6 ದಿನಗಳ ವಿಳಂಬವಾಗಿರುತ್ತದೆ ಎಂದರೆ ನಿಜ. ದೂರಿನಲ್ಲಿ ಯಾವ ಕಾರಣಕ್ಕೆ ವಿಳಂಬವಾಗಿರುತ್ತದೆ ಎಂದು ನಮೂದಾಗಿರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಗಾಯಾಳು ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಹೇಳುತ್ತಾರೆ.

11. ದೂರಿನಲ್ಲಿ ಗಾಯಾಳು ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ಪೂರಕವಾದ ದಾಖಲೆಗಳ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ನಿಜ. ಘಟನೆ ಜಾಗದ ಪಂಚನಾಮೆ ಮಾಡುವ ಕಾಲಕ್ಕೆ ಯಾವುದೇ ಫೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ನಿಜ. ನಾನು ದೋಷರೋಪಣ ಪಟ್ಟಿ ಸಲ್ಲಿಸುವ ಕಾಲಕ್ಕೆ ಅಕ್ಕಪಕ್ಕದ ನಿವಾಸಿಗಳ ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ಅದೇ ರೀತಿಯಾಗಿ ಸದರಿ ಜಾಗವು ಸಮತಟ್ಟಾಗಿರುತ್ತದೆಯೋ ಅಥವಾ ಇಳಿಜಾರಿನಲ್ಲಿ ಇರುತ್ತದೆಯೇ ಎಂದು ನಾನು ಪಂಚನಾಮೆ ಮಾಡಿರುವುದಿಲ್ಲ. ಸದರಿ ಜಾಗದಲ್ಲಿ ವಾಹನವನ್ನು ನಿಲ್ಲಿಸಿದರೆ ತನ್ನಿಂದ ತಾನೇ ಚಲಿಸುವಂತಹ ಸಾಧ್ಯತೆ ಇರುತ್ತದೆಯೇ ಎನ್ನುವ ಬಗ್ಗೆ RTO ರವರಿಂದ ಅಥವಾ ಇನ್ನಿತರ ಪರಿಣಿತರಿಂದ ವರದಿ ಪಡೆದುಕೊಂಡಿರುವುದಿಲ್ಲ.

12. ಮಹಜರ್ ಮತ್ತು ಕಚ್ಚಾ ನಕಾಶೆಯನ್ನು ಠಾಣೆಯಲ್ಲೇ ತಯಾರು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಕೆಂಪಮ್ಮ ಇವರ ಸಾವಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಕೂಡ ಸುಳ್ಳು ದಾಖಲೆಗಳ ಆಧಾರದ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಕೂಡ ನಮ್ಮ ಹಿಂದಿನ ಅಧಿಕಾರಿಗಳು ಮಾಡಿದ ತಪ್ಪು ತನಿಖೆಗೆ ಪೂರಕವಾಗಿ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪುಾರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ..

**(ಮಧ್ವೇಶ ಡಬೇರ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.